**ಕರ್ನಾಟಕ ಸರ್ಕಾರ** **ಕಾರ್ಮಿಕ ಇಲಾಖೆ**

**ಸಂಖ್ಯೆ:** ಕಾಆಕ/ವೇಪಾಕಾ/ಸಿಆರ್–1/2018–19

ಕಾರ್ಮಿಕ ಆಯುಕ್ತರವರ ಕಛೇರಿ,
ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ,
ಬೆಂಗಳೂರು–29, ದಿನಾಂಕ: 05–05–2018

## :ಸುತ್ತೋಲೆ:

**ವಿಷಯ:** ವೇತನ ಪಾವತಿ ಕಾಯ್ದೆ 1936ರಡಿ ಕಾರ್ಮಿಕರಿಗೆ ವೇತನವನ್ನು ಪಾವತಿಸುವ ಬಗ್ಗೆ.

**ಉಲ್ಲೇಖ:** 1) ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಈ–ಮೇಲ್ ಸಂದೇಶ ದಿನಾಂಕ: 05–05–2018

2) ಈ ಕಛೇರಿಯ ಸುತ್ತೋಲೆ ಸಂ: ಪಿ ಅಂಡ್ಎಸ್/ಎನ್ ಎಫ್ ಹೆಚ್/ಸಿಆರ್–1/2018–19, ದಿನಾಂಕ:13/04/2018

3) ಈ ಕಛೇರಿ ಆದೇಶ ಸಂಖ್ಯೆ: ಪಿ ಅಂಡ್ಎಸ್/ಎನ್ ಎಫ್ ಹೆಚ್/ಸಿಆರ್–1/2018–19, ದಿನಾಂಕ:05/05/2018

4) ಈ ಕಛೇರಿ ಪತ್ರಿಕಾ ಪ್ರಕಟಣೆ ಸಂಖ್ಯೆ: ಪಿ ಅಂಡ್ಎಸ್/ಎನ್ ಎಫ್ ಹೆಚ್/ಸಿಆರ್–1/2018–19, ದಿನಾಂಕ:04/05/2018

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನಸಭೆಯ ಚುನಾವಣೆಯ ಪ್ರಕ್ರಿಯೆಯ ಭಾಗವಾಗಿ ದಿನಾಂಕ: 12–05–2018 ರಂದು ಮತದಾನವನ್ನು ನಿಗಧಿಪಡಿಸಲಾಗಿರುತ್ತದೆ. ಈ ಹಿನ್ನಲೆಯಲ್ಲಿ ರಾಜ್ಯದಾದ್ಯಂತ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ, ಕಟ್ಟಡ ಮತ್ತು ಇತರೆ ನಿರ್ಮಾಣ ಸಂಸ್ಥೆಗಳಲ್ಲಿ, ಗುತ್ತಿಗೆದಾರರುಗಳಲ್ಲಿ ಹಾಗೂ ಇತರೆ ಉದ್ಯೋಗದಾತರುಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ಕಾರ್ಮಿಕರುಗಳಿಗೆ ಉದ್ಯೋಗದಾತರುಗಳು, ವೇತನ ಪಾವತಿ ಕಾಯ್ದೆ 1936ರ ಪ್ರಾವಧಾನಗಳನ್ವಯ ಈ ಕೆಳಕಂಡಂತೆ ಕೋಷ್ಠಕದಲ್ಲಿ ತೋರಿಸಿರುವಂತೆ ವೇತನವನ್ನು ಪಾವತಿಸಲು ಸೂಚಿಸಲಾಗಿರುತ್ತದೆ.

| ಕ್ರ ಸಂ | ಉದ್ಯೋಗದಾತರುಗಳಲ್ಲಿರುವ ಕಾರ್ಮಿಕರ ಸಂಖ್ಯೆ | ವೇತನ ಪಾವತಿಸಬೇಕಾದ ದಿನಾಂಕ | ಷರಾ |
|---|---|---|---|
| 1 | ಒಂದು ಸಾವಿರಕ್ಕೂ ಕಡಿಮೆ ಸಂಖ್ಯೆಯ ಕಾರ್ಮಿಕರು | 07/05/2018ರೊಳಗಾಗಿ | 1) ಉಲ್ಲೇಖ(2), (3) ಹಾಗೂ (4) ರಲ್ಲಿ ಈಗಾಗಲೇ ಸೂಚಿಸಿರುವಂತೆ ದಿನಾಂಕ: 12.05.2018ರ ಕರ್ನಾಟಕ ವಿಧಾನಸಭಾ ಚುನಾವಣೆಯ ಮತದಾನದ ದಿನದಂದು ಅರ್ಹ ಕಾರ್ಮಿಕರು ತಮ್ಮ ಮತದಾನದ ಹಕ್ಕನ್ನು ಚಲಾಯಿಸುವುದನ್ನು ಅನುವು ಮಾಡಿಕೊಡುವ ಹಿತದೃಷ್ಟಿಯಿಂದ ನಿಯಮಾನುಸಾರ ವೇತನ ಪಾವತಿಗೆ ಈ ಮೂಲಕ ಆದೇಶಿಸಿದೆ.<br>2) ವಾರದ ವೇತನ ಪದ್ಧತಿ ಇದ್ದಲ್ಲಿ, ಕಾರ್ಮಿಕರುಗಳ ವೇತನವನ್ನು ವಾರದ ಕೊನೆಯ ದಿನವಾದ ಶನಿವಾರದ ಬದಲು ಶುಕ್ರವಾರ ದಿನಾಂಕ: 11.05.2018 ರಂದೇ ವೇತನವನ್ನು ಪಾವತಿಸಲು ಎಲ್ಲಾ ಉದ್ಯೋಗದಾತರುಗಳಿಗೆ ಈ ಮೂಲಕ ಆದೇಶಿಸಿದೆ. |
| 2 | ಒಂದು ಸಾವಿರ ಅಥವಾ ಅದಕ್ಕೂ ಮೇಲ್ಪಟ್ಟ ಸಂಖ್ಯೆಯ ಕಾರ್ಮಿಕರು | 10/05/2018ರೊಳಗಾಗಿ | |

05/05/2018

**ಜಂಟಿ ಕಾರ್ಮಿಕ ಆಯುಕ್ತರು**
**(ಕನಿಷ್ಠ ವೇತನ)**
ಕಾರ್ಮಿಕ ಇಲಾಖೆ

**ಇವರಿಗೆ,**

1. ಎಲ್ಲಾ ಉಪ ಕಾರ್ಮಿಕ ಆಯುಕ್ತರುಗಳು
2. ಎಲ್ಲಾ ಸಹಾಯಕ ಕಾರ್ಮಿಕ ಆಯುಕ್ತರುಗಳು
3. ಎಲ್ಲಾ ಕಾರ್ಮಿಕ ಅಧಿಕಾರಿಗಳು, ತಮ್ಮ ಅಧೀನದಲ್ಲಿ ಬರುವ ಎಲ್ಲಾ ಹಿರಿಯ ಕಾರ್ಮಿಕ ನಿರೀಕ್ಷಕರು/ಕಾರ್ಮಿಕ ನಿರೀಕ್ಷಕರುಗಳಿಗೆ ಸೂಚಿಸುವುದು

**ಪ್ರತಿಯನ್ನು ಮಾಹಿತಿಗಾಗಿ:**

1) **ಮಾನ್ಯ ಮುಖ್ಯ ಚುನಾವಣಾಧಿಕಾರಿಗಳು, ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು**
2) **ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ವಿಧಾನಸೌಧ, ಬೆಂಗಳೂರು**
3) **ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ವಿಕಾಸಸೌಧ, ಬೆಂಗಳೂರು**
4) **ಅಪರ ಕಾರ್ಮಿಕ ಆಯುಕ್ತರು (ಆಡಳಿತ/ ಕೈಗಾರಿಕಾ ಬಾಂಧವ್ಯ), ಬೆಂಗಳೂರು**
5) **ನಿರ್ದೇಶಕರು, ಕಾರ್ಖಾನೆ ಮತ್ತು ಬಾಯ್ಲರ್‌ಗಳ ಇಲಾಖೆ ಬೆಂಗಳೂರು– ತಮ್ಮ ಕಾರ್ಯವ್ಯಾಪ್ತಿಯಲ್ಲಿ ಕ್ರಮವಹಿಸುವಂತೆ ಈ ಮೂಲಕ ಕೋರಿದೆ.**
6) ಎಲ್ಲಾ ಉದ್ಯೋಗದಾತರ ಸಂಘಗಳಿಗೆ ಕಳುಹಿಸುತ್ತಾ, ಈ ಮಾಹಿತಿಯನ್ನು ತಮ್ಮ ಸಂಘದ ಸದಸ್ಯರುಗಳ ಗಮನಕ್ಕೆ ತಂದು ಅನುಷ್ಠಾನಗೊಳಿಸುವ ಕ್ರಮವಹಿಸಲು ಸೂಚಿಸಿದೆ.